ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯಮಂತ್ರಿಗಳು ತಮ್ಮ ಉತ್ತರದೊಳಗೆ, ನಾಲ್ಕು ಸಾವಿರಕ್ಕೂ ಹೆಚ್ಚು ಕೊಳವೆಬಾವಿಗಳಿಗೆ ಇನ್ನೂ ನೀರೆತ್ತುವ ವ್ಯವಸ್ಥೆ ಮಾಡಿಲ್ಲವೆಂದು ತಾವು ಹೇಳಿದ್ದೀರಿ. ನಾನು ಮುಂದೆ ಇನ್ನೊಂದು ಪ್ರಶ್ನೆಯನ್ನು ಕೇಳಿದೆ, ಕೊಳವೆಬಾವಿಗಳಿಂದ ನೀರೆತ್ತುವ ಸೌಲಭ್ಯವನ್ನು ನೀಡದಿರುವುದರಿಂದ ರೈತರಿಗೆ ಆಗಿರುವ ಅಂದಾಜು ಹಾನಿಯೆಷ್ಟು? ರೈತರಿಗೆ ಏನೂ ಹಾನಿಯಾಗಿಲ್ಲವೆಂದು ತಾವು ಉತ್ತರ ಕೊಟ್ಟಿದ್ದೀರಿ. ನೀರನ್ನು ಬಾವಿಯಿಂದ ಎತ್ತಿ ಕೊಟ್ಟಿದ್ದರೆ ಎರಡೂವರೆ ವರ್ಷಗಳಿಂದ ಒಂದು ಐದು ಪೀಕ್ ಬರುತ್ತಿದ್ದವು. ರೈತರಿಗೆ ಏನೂ ಹಾನಿಯಾಗಿಲ್ಲವೆಂದರೆ ಹೇಗೆ ? ಸುಮಾರು ರೈತರಿಗೆ ನೂರು ಕೋಟಿ ರೂಪಾಯಿಗೂ ಹೆಚ್ಚು ಹಾನಿಯಾಗಿದೆ. ಅದಕ್ಕಾಗಿ ಆ ನಾಲ್ಕು ಸಾವಿರ ಕೊಳವೆಬಾವಿಗಳಿಗೆ ಎಷ್ಟು ದಿವಸದೊಳಗೆ ನೀವು ಪಂಪ್‌ಸೆಟ್ ಅಳವಡಿಸಿ ನೀರೆತ್ತಲು ವ್ಯವಸ್ಥೆಮಾಡಿ ಕೊಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಹಾನಿಯಾಗಿಲ್ಲ ಎನ್ನತಕ್ಕ ಮಾತು ಏನಿದೆ ಅದಕ್ಕೆ ಉತ್ತರ ಹೇಳುತ್ತೇನೆ. ಇಲ್ಲಿ ನೂರಕ್ಕೆ ನೂರರಷ್ಟು ಮುಫತ್ತಾಗಿ ನಾವು ಕೊಡುತ್ತೇವೆ,. ಇದುವರೆಗೆ ನೀರು ಹಾಯಿಸಿ ಅದು ಕಡಿಮೆಯಾಗಿದ್ದರೆ ಆವಾಗ ಅದು ಹಾನಿಯಾಗುತ್ತಿತ್ತು. ಈಗ ಹೊಸದಾಗಿ ಕೊಳವೆಬಾವಿ ಕೊರೆದು ನೀರೆತ್ತತಕ್ಕ ಕೆಲಸ ಮಾಡುತ್ತೇವೆ. ನಾಲ್ಕು ಸಾವಿರ ಮೋಟಾರುಗಳನ್ನು ಕೊಂಡುಕೊಳ್ಳಲಿಕ್ಕೆ ವಿಧಾನ ಪರಿಷತ್‌ನಲ್ಲಿ ಸದನ ಸಮಿತಿಯನ್ನು ಮಾಡಿ ಅದು ತನ್ನ ರಿಪೋರ್ಟ್ ಕೊಟ್ಟಿದೆ. ಆ ರಿಪೋರ್ಟ್‌ನ ಆಧಾರದ ಮೇಲೆ ಟೆಂಡರ್‌ಗಳನ್ನು ಕರೆದಿದ್ದೇವೆ. ಟೆಂಡರ್‌ಗಳನ್ನು ಕೂಡ ಓಪನ್ ಮಾಡಿದ್ದಾರೆ. ಇನ್ನೊಂದು 15 ದಿವಸಗಳಲ್ಲಿ ಎಲ್ಲಾ ಕಡೆ ಮೋಟಾರುಗಳನ್ನು ಸಪ್ಲೈ ಮಾಡತಕ್ಕ ವ್ಯವಸ್ಥೆಮಾಡುತ್ತೇವೆ. ನಾಲ್ಕು ಸಾವಿರ ಕೊಳವೆಬಾವಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡತಕ್ಕ ವ್ಯವಸ್ಥೆಯನ್ನು ಸಹ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಡುತ್ತೇನೆ.

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಡಿ. ಮುಜುನಾಥ್ : (ಅರಣ್ಯ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ 17ನೇಯ ಪಟ್ಟಿಯಲ್ಲಿ 44 ಪ್ರಶ್ನೆಗಳ ಪೈಕಿ 40 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಹುಬ್ಬಳ್ಳಿಯ ಕೃಷ್ಣಾಪೂರದಲ್ಲಿ ಅನಧಿಕೃತ ಕಟ್ಟಡಗಳನ್ನು ತೆರವು ಗೊಳಿಸುವುದು

1083 (1530) :

ಶ್ರೀ ಅಶೋಕ್ ಕಾಟ್ಟೆ, (ಹುಬ್ಬಳ್ಳಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ ಕೃಷ್ಣಾಪೂರ ರಿಸ.ನಂ93ಎ ರಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ 1988ರಲ್ಲಿ 76 ಜನ ನಿವೇಶನರಹಿತರಿಗೆ ಪ್ಲಾಟುಗಳನ್ನು ನೀಡಿ ಅವರಿಂದ ಟ್ಯಾಕ್ಸ್ ತುಂಬಿಕೊಂಡು ಹಕ್ಕುಪತ್ರ ನೀಡಿದ್ದರೂ, ಈವರೆಗೂ ಸಂಬಂಧಿಸಿದವರಿಗೆ ಖರೀದಿ ಮಾಡಿ ಕೊಟ್ಟಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರೀ ಪ್ಲಾಟುಗಳಲ್ಲಿ ಬೇರೆಯವರು ಗುಡಿಸಲು ಹಾಕಿ ಅನಧಿಕೃತವಾಗಿ ವಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?